# ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಹರಗುವಳ್ಳಿ.
# ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

## 2022-23ನೇ ಸಾಲಿನ ಕಲಿಕಾ ಚೇತರಿಕೆ ಕಾರ್ಯಕ್ರಮ :

## “ಕಲಿಕಾ ಫಲಗಳ ಪಟ್ಟಿ”

### ತರಗತಿ : 8ನೇ ತರಗತಿ


- ಮೋನಿಕ ಎಲ್. ಡಿ

ವಿಜ್ಞಾನ ಸಹಶಿಕ್ಷಕರು,
ಸ|| ಪ|| ಪೂ|| ಕಾ|| ಪ್ರೌಢಶಾಲೆ,
ಹರಗುವಳ್ಳಿ, ಶಿಕಾರಿಪುರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ. ೫೭೭೪೨೭
ಮೊ.ಸಂ: ೯೯೦೨೫೮೯೫೦೯


| ತಿಂಗಳು | ಘಟಕ | ಕಲಿಕಾ ಫಲಗಳು | ಮೌಲ್ಯಮಾಪನ |
|---|---|---|---|
| ಮೇ ೨೦೨೨ | ನೈದಾನಿಕ ಪರೀಕ್ಷೆ | ನೈದಾನಿಕ ಅವಲೋಕನ-ಕಲಿಕೆಯ ಮೂಲಭೂತ ಅಂಶಗಳ ಪುನರ್ಬಲನ | |
| ಜೂನ್-೨೨ | ಬೆಳೆಯ ಉತ್ಪಾದನೆ ಮತ್ತು ನಿರ್ವಹಣೆ | ೧. ನಾವು ಸೇವಿಸುವ ಆಹಾರದ ಮೂಲಗಳನ್ನು ತಿಳಿಯುವರು.<br>೨.ಆಹಾರವಾಗಿ ಬಳಸುವ ಸಸ್ಯದ ವಿವಿಧ ಭಾಗಗಳನ್ನು ಗುರುತಿಸಿ, ಅವುಗಳನ್ನು ಪತ್ತೆಹಚ್ಚುವರು.<br>೩. ಆಹಾರದಲ್ಲಿರುವ ವಿವಿಧ ಪೋಷಕಾಂಶಗಳನ್ನು ಗುರುತಿಸಿ ತಮ್ಮ ಆಹಾರದಲ್ಲಿ ಗುರುತಿಸುವರು.<br>೪. ಬೆಳೆ ಅರ್ಥ ತಿಳಿದು, ಬೆಳೆಯ ವಿಧಗಳನ್ನು ಉದಾಹರಣೆ ಸಹಿತ ವರ್ಗೀಕರಿಸುವರು.<br>೫. ಕೃಷಿಯ ಹಂತಗಳನ್ನು ಅರಿಯುವರು. | |
| | | ೧. ವಿವಿಧ ಬಗೆಯ ಆವಾಸ ಸ್ಥಾನಗಳಲ್ಲಿ ಜೀವಿಗಳ ಹೊಂದಾಣಿಕೆಯನ್ನು ಅರಿಯುವರು.<br>೨. ಅರಣ್ಯ ನಾಶದ ಅರ್ಥ ಮತ್ತು ಅದರ ಕಾರಣಗಳನ್ನು ತಿಳಿಯುವರು. | |

| | | | |
|---|---|---|---|
| ಜೂನ್-೨೨ | ಸಸ್ಯಗಳ ಮತ್ತು ಪ್ರಾಣಿಗಳ ಸಂರಕ್ಷಣೆ | ೩. ಅರಣ್ಯ ನಾಶದ ಪರಿಣಾಮಗಳನ್ನು ಅರಿಯುವರು. ಕಾಡುಗಳ ಪ್ರಾಮುಖ್ಯತೆ ಅರಿತು ಪರಿಸರ ಪ್ರಜ್ಞೆ ಬೆಳೆಸಿಕೊಳ್ಳುವರು.<br>೪. ವನ್ಯಜೀವಿಗಳ ಸಂರಕ್ಷಣೆಗಾಗಿ ಸರ್ಕಾರ ರೂಪಿಸಿರುವ ಸಂರಕ್ಷಿತ ಪ್ರದೇಶಗಳ ಮಹತ್ವವನ್ನು ತಿಳಿಯುವರು. ವನ್ಯಜೀವಿಧಾಮ, ರಾಷ್ಟ್ರೀಯ ಉದ್ಯಾನವನ ಮತ್ತು ಮೀಸಲು ಜೀವಿಗೋಳಗಳ<br>೫. ಸ್ಥಳೀಯ ಪ್ರಭೇದಗಳನ್ನು ಗುರುತಿಸಿ ಅವುಗಳ ಪ್ರಾಮುಖ್ಯತೆಯನ್ನು ಅರಿಯುವರು.<br>೬. ಕೆಂಪು ದತ್ತಾಂಶ ಪುಸ್ತಕದ ಬಗ್ಗೆ ಮಾಹಿತಿ ಪಡೆಯುವರು. | ರೂಪಣಾತ್ಮಕ ಮೌಲ್ಯಮಾಪನ ೧ |
| ಜುಲೈ-೨೨ | ಸಂಶ್ಲೇಷಿತ ನೂಲುಗಳು ಮತ್ತು ಪ್ಲಾಸ್ಟಿಕ್‌ಗಳು | ೧. ವಿವಿಧ ಬಟ್ಟೆಯ ತಯಾರಿಕೆಯ ವಿಧಾನ/ಕ್ರಮಗಳನ್ನು ವಿವರಿಸುವರು.<br>೨. ಸಂಶ್ಲೇಷಿತ ನಾರಿನ ತಯಾರಿಕೆಯ ವಿಧಾನ/ಕ್ರಮಗಳನ್ನು ವಿವರಿಸುವರು.<br>೩. ನಿತ್ಯ ಬಳಕೆಯಲ್ಲಿನ ಪ್ಲಾಸ್ಟಿಕ್ ವಸ್ತುಗಳನ್ನು ಗುಣಲಕ್ಷಣದ ಆಧಾರದ ಮೇಲೆ ವರ್ಗೀಕರಿಸುವರು. | |
| ಜುಲೈ-೨೨ | ಬಲ ಮತ್ತು ಒತ್ತಡ | ೧. ಬಲ ಎಂದರೆ ತಳ್ಳುವಿಕೆ/ಎಳೆಯುವಿಕೆ ಎಂಬುದನ್ನು ಅರ್ಥೈಸಿಕೊಳ್ಳುವರು.<br>೨. ಬಲಗಳ ಅನ್ವೇಷಣೆ-ಬಲವು ಚಲನೆಯ ಸ್ಥಿತಿ ಮತ್ತು ವಸ್ತುವಿನ ಆಕಾರವನ್ನು ಬದಲಾಯಿಸ ಬಹುದು ಎಂದು ವಿವರಿಸುವರು.<br>೩. ಬಲದ ವಿಧಗಳನ್ನು ತಿಳಿಯುವರು. ಸಂಪರ್ಕ ಬಲದ ಅರ್ಥ ತಿಳಿದು ವಿವಿಧ ಬಗೆಯ ಸಂಪರ್ಕ ಬಲಗಳನ್ನು ವಿವರಿಸುವರು. ಸ್ನಾಯು ಶಕಿ ಬಲ, ಘರ್ಷಣೆ ಬಲ<br>೪. ಸಂಪರ್ಕ ರಹಿತ ಬಲದ ಅರ್ಥ ತಿಳಿದು ವಿವಿಧ ಬಲಗಳನ್ನು ವಿವರಿಸುವರು. ಕಾಂತೀಯ ಬಲ, ಸ್ಥಾಯಿ ವಿದ್ಯುತ್ ಬಲ, ಗುರುತ್ವಾಕರ್ಷಣ ಬಲ<br>೫. ಒತಡದ ಅರ್ಥ ತಿಳಿದು, ದ್ರವ ಮತ್ತು ಅನಿಲಗಳಿಂದ ಉಂಟಾಗುವ ಒತ್ತಡವನ್ನು ವಿವರಿಸುವರು. ವಾತಾವರಣದ ಒತ್ತಡವನ್ನು ವಿವರಿಸುವರು. | |

| ತಿಂಗಳು | ಘಟಕ | ಕಲಿಕಾ ಫಲಗಳು | ಮೌಲ್ಯಮಾಪನ |
|---|---|---|---|
| ಆಗಸ್ಟ್-೨೨ | ಸೂಕ್ಷ್ಮಜೀವಿಗಳು-ಮಿತ್ರ ಮತ್ತು ಶತ್ರು | ೧. ಸೂಕ್ಷ್ಮಜೀವಿಗಳ ಅರ್ಥ ತಿಳಿದು ಅವುಗಳ ಪ್ರಧಾನ ಗುಂಪುಗಳನ್ನು ಗುರುತಿಸುವರು.<br>೨. ಸೂಕ್ಷ್ಮಜೀವಿಗಳ ಉಪಯೋಗಗಳನ್ನು ಅರಿಯುವರು.<br>೩. ಮಾನವನಲ್ಲಿ ರೋಗಕ್ಕೆ ಕಾರಣವಾಗುವ ಸೂಕ್ಷ್ಮಜೀವಿಗಳು ಮತ್ತು ಅವುಗಳಿಂದ ಉಂಟಾಗುವ ರೋಗಗಳನ್ನು ತಿಳಿಯುವರು.<br>೪. ಆಹಾರ ಸಂರಕ್ಷಣೆಯ ವಿಧಾನಗಳನ್ನು ತಿಳಿಯುವರು. | ರೂಪಣಾತ್ಮಕ ಮೌಲ್ಯಮಾಪನ-೨ |
| ಆಗಸ್ಟ್-೨೨ | ವಸ್ತುಗಳು: ಲೋಹಗಳು ಮತ್ತು ಅಲೋಹಗಳು | ೧. ಲೋಹ/ಅಲೋಹಗಳನ್ನು ಅವುಗಳ ಭೌತಗುಣಗಳ ಆಧಾರದ ಮೇಲೆ ವರ್ಗೀಕರಿಸುವರು ಮತ್ತು ವಿವರಿಸುವರು.<br>೨. ಲೋಹ/ಅಲೋಹಗಳು ಆಮ್ಲಜನಕ, ನೀರು, ಆಮ್ಲ-ಪ್ರತ್ಯಾಮ್ಲದೊಂದಿಗೆ ವರ್ತಿಸುವುದನ್ನು ಪರೀಕ್ಷಿಸಿ ತೀರ್ಮಾನ ಕೈಗೊಳ್ಳುವರು.<br>೩. ಆಮ್ಲ-ಪ್ರತ್ಯಾಮ್ಲಗಳ ಗುಣಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸುವರು ಮತ್ತು ಆಮ್ಲ-ಪ್ರತ್ಯಾಮ್ಲಗಳಲ್ಲಿನ **8**ಲೋಹ/ಅಲೋಹಗಳನ್ನು ಗುರುತಿಸುವರು. | |
| ಸೆಪ್ಟಂಬರ್-೨೨ | ಕಲ್ಲಿದ್ದಲು **&** ಪೆಟ್ರೋಲಿಯಂ | ೧. ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ವರ್ಗೀಕರುಸುವುದು. ಬರಿದಾಗದ ಮತ್ತು ಬರಿದಾಗುವ ಸಂಪನ್ಮೂಲಗಳನ್ನು ತಿಳಿದು ಅವುಗಳ ಪ್ರಾಮುಖ್ಯತೆಯನ್ನು ಅರಿಯುವರು.<br>೨. ಕಲ್ಲಿದ್ದಲು ಉಂಟಾಗುವಿಕೆ ಮತ್ತು ಅದರ ಉಪ ಉತ್ಪನ್ನಗಳನ್ನು ತಿಳಿಯುವರು.<br>೩. ಪೆಟ್ರೋಲಿಯಂ-ಗಣಿಗಾರಿಕೆ, ಸಂಸ್ಕರಣೆ ಮತ್ತು ಉಪಯೋಗಗಳನ್ನು ಅರಿಯುವರು.<br>೪. ಪಳೆಯುಳಿಕೆ ಇಂಧನಗಳ ಉಳಿವಿಗಾಗಿ ಕೆಲವು ಕ್ರಮಗಳನ್ನು ತಿಳಿಸುವರು. | |


- ಮೋನಿಕ ಎಲ್ ಡಿ, ಸಹಶಿಕ್ಷಕರು, ಸ॥ ಪ॥ ಪೂ॥ ಕಾ॥ ಪ್ರೌಢಶಾಲಾ ವಿಭಾಗ, ಹರಗುವಳ್ಳಿ, ಶಿಕಾರಿಪುರ ತಾಲ್ಲೂಕು. ಶಿವಮೊಗ್ಗ ಜಿಲ್ಲೆ.

| | | | |
|---|---|---|---|
| ಸೆಪ್ಟಂಬರ್-೨೨ | ಘರ್ಷಣೆ | ೧. ಚಲನೆಯನ್ನು ವಿವರಿಸಲು ಸಮರ್ಥರಾಗುವರು. ಚಲನೆಯ ವಿಧಗಳನ್ನು ವರ್ಗೀಕರಿಸುವರು.<br>೨. ಚಲಿಸಿದ ದೂರ, ಜವವನ್ನು ಲೆಕ್ಕಾಚಾರ ಮಾಡಿ ಅವುಗಳನ್ನು ಏಕಮಾನದಲಿ ವ್ಯಕ್ತಪಡಿಸುವರು.<br>೩. ಲಭ್ಯವಿರುವ ಚಲನೆಯ ಮಾಹಿತಿಯನ್ನು ಆಧರಿಸಿ ಏಕರೂಪ ಮತ್ತು ಏಕರೂಪವಲ್ಲದ ಚಲನೆಯನ್ನು ವ್ಯತ್ಯಾಸಿಸುವರು.<br>೪. ಚಲಿಸುತಿರುವ ವಸ್ತುವು ನಿಶ್ಚಲ ಸ್ಥಿತಿಗೆ ಬರಲು ಕಾರಣವನ್ನು ವಿವರಿಸುವರು.<br>೫. ಘರ್ಷಣೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಗುರುತಿಸುವರು.<br>೬. ಘರ್ಷಣೆಯ ವಿಧಗಳಾದ ಸ್ಥಾಯಿ ಘರ್ಷಣೆ, ಜಾರು ಘರ್ಷಣೆ ಮತ್ತು ಉರುಳು ಘರ್ಷಣೆಯನ್ನು ಸರಳವಾದ ಪ್ರಯೋಗ ಮಾಡುವುದರ ಮೂಲಕ ಅರ್ಥೈಸಿಕೊಳ್ಳುವರು. | |
| ಅಕ್ಟೋಬರ್-೨೨ | ಪುನರಾವರ್ತನೆ ಮತ್ತು ಸಂಕಲನಾತ್ಮಕ ಮೌಲ್ಯಮಾಪನ – ೧ | | |

| ತಿಂಗಳು | ಘಟಕ | ಕಲಿಕಾ ಫಲಗಳು | ಮೌಲ್ಯಮಾಪನ |
|---|---|---|---|
| ನವೆಂಬರ್ ೨೦೨೨ | ಜೀವಕೋಶ-ರಚನೆ ಮತ್ತು ಕಾರ್ಯ | ೧.ಸಸ್ಯಜೀವಕೋಶ/ಪ್ರಾಣಿಜೀವಕೋಶಗಳನ್ನು ಗುರುತಿಸಿ, ಅದರ ಚಿತ್ರ ಬರೆದು ಭಾಗಗಳನ್ನು ಗುರುತಿಸುವರು.<br>೨. ಕಣದಂಗಗಳಾದ ಕೋಶಪೊರೆ, ಕೋಶಕೇಂದ್ರ ಮತ್ತು ಪತ್ರಹರಿತ್ತಿನ ಕಾರ್ಯಗಳನ್ನು ತಿಳಿಯುವರು.<br>೩. ಸಸ್ಯಜೀವಕೋಶ ಮತ್ತು ಪ್ರಾಣಿಜೀವಕೋಶವನ್ನು ವ್ಯತ್ಯಾಸಿಸುವರು. | ರೂಪಣಾತ್ಮಕ ಮೌಲ್ಯಮಾಪನ-೩ |
| ನವೆಂಬರ್ ೨೦೨೨ | ದಹನ ಮತ್ತು ಜ್ವಾಲೆ | ೧. ದಹ್ಯ ಮತ್ತು ಅದಹ್ಯ ವಸ್ತುಗಳನ್ನು ವರ್ಗೀಕರಿಸುವರು.<br>೨. ಪ್ರಯೋಗವೆನ್ನು ಕೈಗೊಳ್ಳುವ ಮೂಲಕ ಜ್ವಲನ ತಾಪವನ್ನು ತಿಳಿಯುವರು.<br>೩. ಸ್ವಯಂದಹನ ಮತ್ತು ಕ್ಷಿಪ್ರ ದಹನವನ್ನು ವ್ಯತ್ಯಾಸಿಸುವರು.<br>೪. ಬೆಂಕಿ ಉರಿಯುವ ಮತ್ತು ನಂದಿಸುವ ಪ್ರಕ್ರಿಯೆಯನ್ನು ವಿವರಿಸುವರು. | |
| ನವೆಂಬರ್ ೨೦೨೨ | ವಿದ್ಯುತ್ ಪ್ರವಾಹದ ರಾಸಾಯನಿಕ ಪರಿಣಾಮಗಳು | ೧. ಉತ್ತಮ ಮತ್ತು ದುರ್ಬಲ ವಾಹಕಗಳನ್ನು ವ್ಯತ್ಯಾಸಿಸುವರು.<br>೨. ನೀರಿನ ವಿದ್ಯುದ್ವಿಭಜನೆ ಬಗ್ಗೆ ಪ್ರಯೋಗ ಕೈಗೊಂಡು ವಿವರಿಸುವರು.<br>೩. ವಿದ್ಯುಲ್ಲೇಪನ ಕುರಿತು ದಿನನಿತ್ಯ ಜೀವನದಲ್ಲಿ ಅದರ ಉಪಯೋಗಗಲನ್ನು ಪ್ರಶಂಸಿಸುವರು. | |
| ಡಿಸೆಂಬರ್ ೨೦೨೨ | ನೈಸರ್ಗಿಕ ವಿದ್ಯಮಾನಗಳು | ೧. ಮಾರುತ, ಬಿರುಗಾಳಿ ಮತ್ತು ಚಂಡಮಾರುತಗಳಿಂದ ಉಂಟಾಗುವ ಪರಿಣಾಮಗಳನ್ನು ತಿಳಿಯುವರು.<br>೨. ಮಿಂಚಿನ ಅರ್ಥ, ಉಂಟಾಗುವ ರೀತಿ, ಅದರಿಂದ ಆಗುವ ಪರಿಣಾಮಗಳ ಬಗ್ಗೆ, ಇದರಿಂದ ರಕ್ಷಿಸಿಕೊಳ್ಳುವುದನ್ನು ತಿಳಿದುಕೊಳ್ಳುವರು.<br>೩. ಭೂಕಂಪ ಉಂಟಾಗುವ ರೀತಿ, ಅದರಿಂದ ಆಗುವ ಪರಿಣಾಮಗಳ ಬಗ್ಗೆ, ಇದರಿಂದ ರಕ್ಷಿಸಿಕೊಳ್ಳುವುದನ್ನು ತಿಳಿದುಕೊಳ್ಳುವರು. | |
| ಡಿಸೆಂಬರ್ ೨೦೨೨ | ಬೆಳಕು | ೧. ಬೆಳಕನ್ನು ಅರ್ಥೈಸುವರು ಮತ್ತು ದರ್ಪಣದ ವಿಧಗಳನ್ನು ವ್ಯತ್ಯಾಸಿಸುವರು.<br>೨. ದರ್ಪಣದ ನಿಯಮಗಳನ್ನು ತಿಳಿದುಕೊಳ್ಳಲು ಪ್ರಯೋಗಗಳನ್ನು ನಡೆಸುವರು.<br>೩. ಪ್ರತಿಫಲನದ ನಿಯಮಗಳನ್ನು ತಿಳಿಯುವರು ಮತ್ತು ಅನ್ವಯಗಳನ್ನು ವಿವರಿಸುವರು<br>೪. ಪೀನ ಮತ್ತು ನಿಮ್ನ ಮಸೂರದ ಉಪಯೋಗಗಳನ್ನು ತಿಳಿಯುವರು. | |

● ಮೋನಿಕ ಎಲ್ ಡಿ, ಸಹಶಿಕ್ಷಕರು, ಸ॥ ಪ॥ ಪೂ॥ ಕಾ॥ ಪ್ರೌಢಶಾಲಾ ವಿಭಾಗ, ಹರಗುವಳ್ಳಿ, ಶಿಕಾರಿಪುರ ತಾಲ್ಲೂಕು. ಶಿವಮೊಗ್ಗ ಜಿಲ್ಲೆ.

| | | | |
|---|---|---|---|
| | | | |

| ತಿಂಗಳು | ಘಟಕ | ಕಲಿಕಾ ಫಲಗಳು | ಮೌಲ್ಯಮಾಪನ |
|---|---|---|---|
| ಜನವರಿ-೨೩ | ಪ್ರಾಣಿಗಳಲ್ಲಿ ಸಂತಾನೋತ್ಪತ್ತಿ ಹದಿಹರೆಯಕ್ಕೆ ಪ್ರವೇಶ | ೧. ಸಸ್ಯ ಮತ್ತು ಪ್ರಾಣಿಗಳಲ್ಲಿ ಸಂತಾನೋತ್ಪತ್ತಿಯನ್ನು ವಿವರಿಸುವರು.<br>೨. ಲೈಂಗಿಕ ಮತ್ತು ಅಲೈಂಗಿಕ ಸಂತಾನೋತ್ಪತ್ತಿ ಕ್ರಿಯೆಗಳನ್ನು ವ್ಯತ್ಯಾಸಿಸುವರು.<br>೩. ಪ್ರೌಢಾವಸ್ಥೆಯಲ್ಲಿ ಆಗುವ ಬದಲಾವಣೆಗಳನ್ನು ಅರಿತು ಹದಿಹರೆಯದಲ್ಲಿ ಆಗುವ ದೈಹಿಕ, ಮಾನಸಿಕ ಬದಲಾವಣೆಗಳಿಗೆ ಕಾರಣ ಕಂಡುಕೊಳ್ಳುವರು.<br>೪. ಹದಿಹರೆಯದವರ ಪೋಷಣಾ ಅಗತ್ಯಗಳನ್ನು ಅರಿತು ಉತ್ತಮ ಆರೋಗ್ಯಕರ ಅಭ್ಯಾಸಗಳನ್ನು ಬೆಳೆಸಿಕೊಳ್ಳುವರು. | ರೂಪಣಾತ್ಮಕ ಮೌಲ್ಯಮಾಪನ-ಳ |
| ಫೆಬ್ರವರಿ-೨೩ | ವಾಯುಮಾಲಿನ್ಯ & ಜಲಮಾಲಿನ್ಯ | ೧. ವಾಯುಮಾಲಿನ್ಯದ ಕಾರಣ, ಪರಿಣಾಮ, ನಿಯಂತ್ರಿಸುವ ಕ್ರಮಗಳನ್ನು ತಿಳಿಯುವರು.<br>೨. ಜಲಮಾಲಿನ್ಯದ ಕಾರಣ, ಪರಿಣಾಮ, ನಿಯಂತ್ರಿಸುವ ಕ್ರಮಗಳನ್ನು ತಿಳಿಯುವರು. | |
| ಫೆಬ್ರವರಿ-೨೩ | ಶಬ್ದ | ೧. ಶಬ್ದದ ಉತ್ಪತ್ತಿ ವಿವರಿಸುವರು. ಶಬ್ದ ಉತ್ಪತ್ತಿ ಮಾಡುವ ಉಪಕರಣಗಳನ್ನು ವರ್ಗೀಕರಿಸುವರು.<br>೨. ಶಬ್ದ ಪ್ರಸಾರಕ್ಕೆ ಮಾಧ್ಯಮ ಅವಶ್ಯಕ ಎಂಬುದನ್ನು ಚಟುವಟಿಕೆ ಮೂಲಕ ಮಾಡಿ ತೋರಿಸುವರು.<br>೩. ಕಂಪನ ಪಾರ, ಆವರ್ತ ಕಾಲ , ಆವೃತ್ತಿ ಅರ್ಥ ತಿಳಿಯುವುದರೊಂದಿಗೆ ಶಬ್ದದ ತೀವ್ರತೆ ಮತ್ತು ಆವರ್ತವನ್ನು ಅವುಗಳ ಮೂಲಮಾನದೊಂದಿಗೆ ವಿವರಿಸುವರು.<br>೪. ಶ್ರವ್ಯ ಮತ್ತು ಶ್ರವಣಾತೀತ ಶಬ್ದಗಳ ನಡುವಿನ ವ್ಯತ್ಯಾಸಗಳನ್ನು ತಿಳಿಯುವರು.<br>೫. ಶಬ್ದ ಮಾಲಿನ್ಯಕ್ಕೆ ಕಾರಣ, ಪರಿಣಾಮ ಮತ್ತು ನಿಯಂತ್ರಿಸುವ ಕ್ರಮಗಳನ್ನು ಅರಿಯುವರು. | |
| ಮಾರ್ಚ್-೨೩ | ನಕ್ಷತ್ರಗಳು ಮತ್ತು ಸೌರಮಂಡಲ | ೧. ಆಕಾಶಕಾಯಗಳ ಅರ್ಥ ಮತ್ತು ಅವುಗಲನ್ನು ಗುರುತಿಸುವರು.<br>೨. ಗ್ರಹ, ಉಪಗ್ರಹ ಮತ್ತು ನಕ್ಷತ್ರಗಳ ನಡುವಿನ ವ್ಯತ್ಯಾಸಗಳನ್ನು ಅರಿಯುವರು.<br>೩. ನೈಸರ್ಗಿಕ ಮತ್ತು ಕೃತಕ ಉಪಗ್ರಹಗಳ ನಡುವಿನ ವ್ಯತ್ಯಾಸಗಳನ್ನು ಅರಿಯುವರು.<br>೪. ಚಂದ್ರನ ಬಿಂಬಾವಸ್ಥೆಗೆ ಕಾರಣವನ್ನು ವಿವರಿಸುವರು.<br>೫. ಸೌರಮಂಡಲದಲಿನ ಬೇರೆ ಬೇರೆ ಗ್ರಹಗಳ ಲಕ್ಷಣ ಮತ್ತು ವ್ಯತ್ಯಾಸಗಳನ್ನು ತಿಳಿಯುವರು.<br>೬. ನಕ್ಷತ್ರಪುಂಜಗಳ ಅರ್ಥ ತಿಳಿಯುವರು. ಅವುಗಲಲ್ಲಿ ಕೆಲವನ್ನು ರಾತ್ರಿ ಆಕಾಶದಲ್ಲಿ ಗುರುತಿಸುವ ಕೌಶಲ್ಯ ಬೆಳೆಸಿಕೊಳ್ಳುವರು. | |
| ಏಪ್ರಿಲ್-೨೩ | ಪುನರಾವರ್ತನೆ ಮತ್ತು ಸಂಕಲನಾತ್ಮಕ ಮೌಲ್ಯಮಾಪನ – ೨ | | |

## ಕಲಿಕಾಂಶಗಳ ವಿಂಗಡಣೆ :

| ಒಟ್ಟು ಕಲಿಕಾಂಶಗಳು | ೬೦ | ಅಂಕಗಳು | ಫಲಿತಾಂಶ |
|---|---|---|---|

- ಮೋನಿಕ ಎಲ್ ಡಿ, ಸಹಶಿಕ್ಷಕರು, ಸ॥ ಪ॥ ಪೂ॥ ಕಾ॥ ಪ್ರೌಢಶಾಲಾ ವಿಭಾಗ, ಹರಗುವಳ್ಳಿ, ಶಿಕಾರಿಪುರ ತಾಲ್ಲೂಕು. ಶಿವಮೊಗ್ಗ ಜಿಲ್ಲೆ.

| | | | |
|---|---|---|---|
| ರೂಪಣಾತ್ಮಕ ಮೌಲ್ಯಮಾಪನ-೧ | ೧೯ | ೧೫ | ೫೦ ಅಂಕಗಳು |
| ರೂಪಣಾತ್ಮಕ ಮೌಲ್ಯಮಾಪನ-೨ | ೧೭ | ೧೫ | |
| ಸಂಕಲನಾತ್ಮಕ ಮೌಲ್ಯಮಾಪನ-೧ | ೩೦(ಲಿಖಿತ)+೧೦(ಮೌಖಿಕ)=೪೦(೨೦) | | |
| ರೂಪಣಾತ್ಮಕ ಮೌಲ್ಯಮಾಪನ-೩ | ೧೭ | ೧೫ | ೫೦ ಅಂಕಗಳು |
| ರೂಪಣಾತ್ಮಕ ಮೌಲ್ಯಮಾಪನ-೪ | ೧೭ | ೧೫ | |
| ಸಂಕಲನಾತ್ಮಕ ಮೌಲ್ಯಮಾಪನ-೨ | ೩೦(ಲಿಖಿತ)+೧೦(ಮೌಖಿಕ)=೪೦(೨೦) | | |
| ಫಲಿತಾಂಶ | ೧೦೦ ಅಂಕಗಳು | | |


- ಮೋನಿಕ ಎಲ್ ಡಿ, ಸಹಶಿಕ್ಷಕರು, ಸ॥ ಪ॥ ಪೂ॥ ಕಾ॥ ಪ್ರೌಢಶಾಲಾ ವಿಭಾಗ, ಹರಗುವಳ್ಳಿ, ಶಿಕಾರಿಪುರ ತಾಲ್ಲೂಕು. ಶಿವಮೊಗ್ಗ ಜಿಲ್ಲೆ.